ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003

# ಪ್ರಕಟಣೆ

**ಅಧಿಸೂಚನೆ ಸಂಖ್ಯೆ: ಬಿ9–ವಲಅ–ವಿವ–5/2015–16, ದಿನಾಂಕ: 22.03.2016**

## ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ

* * * * *

ದಿನಾಂಕ: 22.03.2017 ರಂದು ಪ್ರಕಟಿಸಲಾದ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ 67 ಅಭ್ಯರ್ಥಿಗಳ ಗಮನಕ್ಕೆ ಈ ಕೆಳಕಂಡ ವಿಷಯವನ್ನು ತರಲಾಗಿದೆ.

1. ಅಭ್ಯರ್ಥಿಗಳು ದಿನಾಂಕ: 03.04.2017 ರಂದು ಪೂರ್ವಾಹ್ನ 10.30 ಗಂಟೆಗೆ ಸರಿಯಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರ ಸಮ್ಮುಖ ಖುದ್ದು ಹಾಜರಾಗುವುದು.

2. ಅಭ್ಯರ್ಥಿಗಳು ಹಾಜರಾಗುವ ಸಮಯದಲ್ಲಿ ರೂ. 100/– ರ ಛಾಪಾ ಕಾಗದದಲ್ಲಿ ಎರಡು ರೀತಿಯ ಕರಾರು ಪತ್ರಗಳನ್ನು ಬೆರಳಚ್ಚು ಮಾಡಿಸಿಕೊಂಡು, ಅಭ್ಯರ್ಥಿಯ ಪೂರ್ಣ ಮಾಹಿತಿಯನ್ನು ಛಾಪಾ ಕಾಗದದಲ್ಲಿ ನಮೂದಿಸುವುದು. (Copy of the undertaking is published in website)

3. ಛಾಪಾ ಕಾಗದದಲ್ಲಿ ಬೆರಳಚ್ಚು ಮಾಡಿಸಬೇಕಾದ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅದರಂತೆ ಬೆರಳಚ್ಚು ಮಾಡಿಸುವುದು. ಮುಂದುವರೆದು, ಅಭ್ಯರ್ಥಿಯು ಇಂಡೆಮ್ನಿಟಿ ಬಾಂಡಿನಲ್ಲಿ ಇಬ್ಬರು ಜಾಮೀನುದಾರರ ಹೆಸರು, ಪೂರ್ಣ ವಿಳಾಸ, ಇತ್ಯಾದಿಗಳನ್ನು ಇಂಡೆಮ್ನಿಟಿ ಬಾಂಡಿನಲ್ಲಿ ನಮೂದಿಸುವುದು. ಈ ಇಬ್ಬರು ಜಾಮೀನುದಾರರು 14,550/– ಕ್ಕಿಂತ ಹೆಚ್ಚು ಮಾಸಿಕ ವೇತನ ಪಡೆಯುತ್ತಿರುವವರು ಮತ್ತು ತರಬೇತಿ ಮುಗಿಯುವ ದಿನಾಂಕಕ್ಕೆ ಕನಿಷ್ಠ 6 ವರ್ಷಗಳ ಸೇವಾ ಅವಧಿ ಉಳಿದಿರುವ ಇಬ್ಬರು ಸರ್ಕಾರಿ ನೌಕರರು ಜಾಮೀನು ನೀಡಬೇಕು.

4. ಒಂದು ವೇಳೆ ಅಭ್ಯರ್ಥಿಯು ಸರ್ಕಾರಿ ಜಾಮೀನುದಾರರು ಒದಗದೇ ಹೋದಲ್ಲಿ, ಅಭ್ಯರ್ಥಿಯು ರೂ. 1,00,000/– ಮೊತ್ತದ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಇವರ ಹೆಸರಿಗೆ ಅಡವು ಇರಿಸಬಹುದಾಗಿದೆ. ಇದಕ್ಕಾಗಿ, ಪ್ರತ್ಯೇಕವಾದ ಇಂಡೆಮ್ನಿಟಿ ಬಾಂಡನ್ನು ಸಿದ್ದಪಡಿಸಿ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಇದರಂತೆ ರೂ. 100/– ಗಳ ಛಾಪಾ ಕಾಗದದಲ್ಲಿ ಬೆರಳಚ್ಚು ಮಾಡಿಸುವುದು.

5. ಅಭ್ಯರ್ಥಿಗಳು ಇಂಡೆಮ್ನಿಟಿ ಬಾಂಡಿನಲ್ಲಿ ಇಬ್ಬರು ಜಾಮೀನುದಾರರು ರೂ. 14,550/– ಕ್ಕಿಂತ ಹೆಚ್ಚು ಮಾಸಿಕ ವೇತನ ಪಡೆಯುತ್ತಿರುವವರು ಮತ್ತು ತರಬೇತಿ ಮುಗಿಯುವ ದಿನಾಂಕದಿಂದ ಕನಿಷ್ಠ 6 ವರ್ಷಗಳ ಸೇವಾ ಅವಧಿ ಉಳಿದಿರುವ ಸರ್ಕಾರಿ ನೌಕರರ ಜಮೀನು ನೀಡುವವರು ಜಾಮೀನುದಾರರ ವೇತನ ದೃಢೀಕರಣ ಪತ್ರ (issued by the Controlling Officer of the Office where the Official is working) ಹಾಗೂ ಜಾಮೀನುದಾರರ ಗುರುತಿನ ಚೀಟಿ (Self Attested) ಜೆರಾಕ್ಸ್ ಪ್ರತಿಯನ್ನು ಇಲಾಖೆಗೆ ಕೊಡಬೇಕು.

6. ಜಾಮೀನುದಾರರು ಹಾಗೂ ಅಭ್ಯರ್ಥಿಯು ಇಂಡೆಮ್ನಿಟಿ ಬಾಂಡಿನಲ್ಲಿ ಸಹಿ ಮಾಡುವಾಗ ಯಾವುದಾದರೂ ನೋಟರಿ ಅಧಿಕಾರಿಯ ಮುಂದೆ ಸಹಿ ಮಾಡಿ, ನೋಟರಿಯವರು ಸಹಿಯನ್ನು ಇಂಡೆಮ್ನಿಟಿ ಬಾಂಡಿನಲ್ಲಿ ಮಾಡಿಸುವುದು ಹಾಗೂ ಇಬ್ಬರು ಸಾಕ್ಷಿದಾರರ ಸಹಿ, ಪೂರ್ಣ ವಿಳಾಸವನ್ನು ಕರಾರು ಪತ್ರ ಹಾಗೂ ಇಂಡೆಮ್ನಿಟಿ ಬಾಂಡಿನಲ್ಲಿ ಮಾಡಿಸುವುದು. ಹೀಗಾಗಿ, ಜಾಮೀನುದಾರರು / ಸಾಕ್ಷಿದಾರರು ನಿಮ್ಮ ಜೊತೆಯಲ್ಲಿ ಧಾರವಾಡಕ್ಕೆ ಬರುವ ಅವಶ್ಯಕತೆ ಇರುವುದಿಲ್ಲ.

7. ಎಲ್ಲಾ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ವೃತ್ತಿ ತರಬೇತಿ ಪ್ರಾರಂಭವಾಗುವ ಹಿನ್ನಲೆಯಲ್ಲಿ ಹಾಜರು ಪಡಿಸುವ ಎಲ್ಲಾ ಮೂಲ ದಾಖಲೆಗಳ ಸಿಂಧುತ್ವ / ಪೋಲೀಸ್ ಇಲಾಖಾ ವರದಿ ಸ್ವೀಕರಿಸುವ ಸಾಧ್ಯತೆ ಕಡಿಮೆ

ಇರುತ್ತದೆ. ಆದಾಗ್ಯೂ, ಆಡಳಿತಾತ್ಮಕ ಹಿತದೃಷ್ಟಿಯಿಂದ ರೂ. 100/– ರ ಛಾಪಾ ಕಾಗದದಲ್ಲಿ ಈ ಕುರಿತಂತೆ ಸವಿಸ್ತಾರವಾದ ಕರಾರು ಪತ್ರವನ್ನು ಅರಣ್ಯ ಇಲಾಖೆಗೆ ಅಭ್ಯರ್ಥಿ ಬರೆದುಕೊಡಬೇಕು. ಇದನ್ನು ಅಭ್ಯರ್ಥಿಯು ನೋಟರಿಯವರ ಸಮ್ಮುಖ ಸಹಿ ಮಾಡಿಸುವುದು.

8. ಅಭ್ಯರ್ಥಿಯು ಬೇರೊಂದು ಇಲಾಖೆಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅಥವಾ ಅರಣ್ಯ ಇಲಾಖೆಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದಲ್ಲಿ ಈ ಬಗ್ಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡುವುದು ಹಾಗೂ ಸದರಿ ಇಲಾಖೆಯಿಂದ ಅನುಮತಿ ಪಡೆದಿರುವ ಪತ್ರದ ಮೂಲ ಪ್ರತಿಯನ್ನು ಸಲ್ಲಿಸುವುದು.

9. ಅಭ್ಯರ್ಥಿಗಳಿಗೆ ಕೆಲವೊಂದು ನಿಬಂಧನೆಗಳ ಮೇರೆಗೆ ವಲಯ ಅರಣ್ಯಾಧಿಕಾರಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗುವುದು.

10. ಎಲ್ಲಾ ಅಭ್ಯರ್ಥಿಗಳು ಮೇಲ್ಕಂಡ ಇಂಡೆಮ್ನಿಟಿ ಬಾಂಡ್ ಹಾಗೂ ಕರಾರು ಪತ್ರ ನೀಡಿದ ಅಭ್ಯರ್ಥಿಗಳಿಗೆ ಮಾತ್ರ ಸದ್ಯದಲ್ಲಿಯೇ ನೇಮಕಾತಿ ಆದೇಶ ನೀಡಲಾಗುವುದು.

11. ಅಭ್ಯರ್ಥಿಗಳಿಗೆ ಮುಂದಿನ ಹಂತದಲ್ಲಿ ನೇಮಕಾತಿ ಆದೇಶ ನೀಡಿದ ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರ ಸಮ್ಮುಖ ಕಾರ್ಯವರದಿ ಮಾಡಿಕೊಂಡು ನಂತರ ನಿಗಧಿಪಡಿಸಿದ ವೃತ್ತಿ ತರಬೇತಿಗಾಗಿ ಆಯಾ ಕಾಲೇಜುಗಳಲ್ಲಿ ಹಾಜರಾಗುವುದು.

12. ಅಭ್ಯರ್ಥಿಗಳು ನೇಮಕಾತಿ ಆದೇಶ ಪಡೆದ ನಂತರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರಲ್ಲಿ ಕಾರ್ಯವರದಿ ಮಾಡಿಕೊಂಡ ನಂತರ ಅಭ್ಯರ್ಥಿಗಳ ಸೇವಾ ಪುಸ್ತಕ, ವೇತನ, ಭತ್ಯೆ, ಇತ್ಯಾದಿಗಳ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರು ಕ್ರಮ ಕೈಗೊಳ್ಳುತ್ತಾರೆ.

13. ಅಭ್ಯರ್ಥಿಯು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡಕ್ಕೆ ಹಾಜರಾಗಲು ಹೋಗಿ ಬರುವ ವೆಚ್ಚವನ್ನು ಸ್ವಂತ ಖರ್ಚಿನಲ್ಲಿ ಭರಿಸುವುದು. ಯಾವುದೇ ತರಹದ ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ.

14. ಕರ್ನಾಟಕ ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಈಗಾಗಲೇ ಪೋಲೀಸ್ ವರದಿ ಕುರಿತು ನಿಗಧಿತ ನಮೂನೆಯನ್ನು ಪ್ರಕಟಿಸಲಾಗಿದ್ದು, ಸದರಿ ನಮೂನೆಯಲ್ಲಿ ಅಭ್ಯರ್ಥಿಯು ಮಾಹಿತಿಯನ್ನು ದ್ವಿಪ್ರತಿಯಲ್ಲಿ ಭರ್ತಿ ಮಾಡಿ, ಸದರಿ ದಿನಾಂಕದಂದು ಹಾಜರುಪಡಿಸುವುದು.

15. ಅಭ್ಯರ್ಥಿಗಳು ಅನಾವಶ್ಯಕವಾಗಿ ಇಲಾಖೆಯ ಹಿರಿಯ ಅಧಿಕಾರಿಗಳ / ಸಿಬ್ಬಂದಿಗಳ ದೂರವಾಣಿಗೆ ಕರೆ ಮಾಡಿ, ಅನಗತ್ಯವಾದ ವಿಚಾರವನ್ನು ದೂರವಾಣಿಯಲ್ಲಿ ಚರ್ಚಿಸುವ ಅಭ್ಯಾಸ ಮಾಡಿಕೊಂಡಿರುವುದು ಈ ಕೆಳಸಹಿದಾರರ ಗಮನಕ್ಕೆ ಬಂದಿರುತ್ತದೆ. ಯಾವುದೇ ಅಭ್ಯರ್ಥಿ ದೂರವಾಣಿ ಕರೆಗಳನ್ನು ಮಾಡಬಾರದಾಗಿ ಎಚ್ಚರಿಗೆ ನೀಡಲಾಗಿದೆ. ಎಲ್ಲಾ ಮಾಹಿತಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಕಾಲಕಾಲಕ್ಕೆ ಪ್ರಕಟಿಸಲಾಗುತ್ತದೆ. ಅದರಂತೆ, ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು
ದಿನಾಂಕ: 22–03–2017

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)

ಪ್ರತಿಯನ್ನು

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾನವ ಸಂಪನ್ಮೂಲ ಅಭಿವೃದ್ಧಿ, ಧಾರವಾಡ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.